ಡುತ್ತೇವೆ. ಭತ್ತವನ್ನು ನಮ್ಮ ಫುಡ್ ಕಾರ್ಪೊರೇಷನ್‌ನ್ನಿನ ಗೋಡೋನ್‌ನಲ್ಲಿ ಇಡುತ್ತೇವೆ ಆದರೆ ಜಿಲ್ಲೆಗೆ ಎಷ್ಟು ಪ್ರಮಾಣ ಅಕ್ಕಿಯನ್ನು ಕೊಡಬೇಕೋ ಅಷ್ಟನ್ನು ಬೆಂಗಳೂರಿನಲ್ಲಿ ಇರಲಿ, ಅಥವಾ ಬೇರೆ ಯಾವ ಜಿಲ್ಲೆಯಲ್ಲೇ ಇರಲಿ, ಅದನ್ನು ಆ ಜಿಲ್ಲೆಗೆ ಪ್ರತಿ ತಿಂಗಳು ಎಷ್ಟು ಅಕ್ಕಿಯನ್ನು ಕೊಡಬೇಕೋ ಅಷ್ಟನ್ನು ಕೊಡುವಂತಹ ಜವಾಬ್ದಾರಿ ನಮ್ಮದು.

ಅಧ್ಯಕ್ಷರು.--ಪ್ರಶ್ನೆ ಸಂಖ್ಯೆ 255 (500) ಶ್ರೀ ಸುದೀಂದ್ರರಾವ್ ಕಸಬಿ-ಆಬ್ಸೆಂಟ್

ಪ್ರಶ್ನೆ ನಂ. 256 (619) ಶ್ರೀ ಆರ್. ಎಸ್. ನಾಯ್ಕ-ಆಬ್ಸೆಂಟ್

ವೈದ್ಯಕೀಯ ಕಾಲೇಜುಗಳಿಗೆ ಸೇರಿಸುವಿಕೆ

257 (663) ಶ್ರೀ ಪಿ. ರಾಮದೇವ್ (ಮಲ್ಲೇಶ್ವರಂ).—ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ;-

ಅ) ಸರ್ಕಾರಿ ವೈದ್ಯಕೀಯ ಕಾಲೇಜುಗಳಲ್ಲಿ 1982-83 ಮತ್ತು 1983-84ರ ವರೆಗೆ ಎಷ್ಟು ಜನ ವಿದ್ಯಾರ್ಥಿಗಳನ್ನು ಸೇರಿಸಿಕೊಳ್ಳಲಾಗಿದೆ.

ಆ) ರಾಜ್ಯದ ಪ್ರತಿಯೊಂದು ವೈದ್ಯಕೀಯ ಕಾಲೇಜುಗಳಲ್ಲಿ ಪ್ರವೇಶ ಶುಲ್ಕದೊಡನೆ ಎಷ್ಟು ಜನ ವಿದ್ಯಾರ್ಥಿಗಳನ್ನು ಸೇರಿಸಿಕೊಳ್ಳಲಾಗಿದೆ.

ಇ) ರಾಜ್ಯದ ಪ್ರತಿ ವೈದ್ಯಕೀಯ ಕಾಲೇಜುಗಳ ಶುಲ್ಕದ ಮೊತ್ತ ಎಷ್ಟು :

ಈ) ರಾಜ್ಯದ ಪ್ರತಿಯೊಂದು ವೈದ್ಯಕೀಯ ಕಾಲೇಜುಗಳಲ್ಲಿ ಪ್ರವೇಶವಾದ ಕನ್ನಡಿಗರೆಷ್ಟು ?

ಶ್ರೀ ಪಿ. ಜಿ. ಆರ್. ಸಿಂಧ್ಯ (ಆರೋಗ್ಯ ಹಾಗೂ ಕುಟುಂಬ ಕಲ್ಯಾಣ ರಾಜ್ಯಮಂತ್ರಿಗಳು) —

ಕಾಲೇಜಿನ ಹೆಸರು	1982-83	1983-84
ಸರ್ಕಾರಿ ವೈದ್ಯಕೀಯ ಕಾಲೇಜುಗಳು		
1) ವೈದ್ಯಕೀಯ ಕಾಲೇಜು, ಬೆಂಗಳೂರು	152	152
2) ವೈದ್ಯಕೀಯ ಕಾಲೇಜು, ಮೈಸೂರು	102	106
3) ಕರ್ನಾಟಕ ವೈದ್ಯಕೀಯ ಕಾಲೇಜು, ಹುಬ್ಬಳ್ಳಿ	100	104
4) ವೈದ್ಯಕೀಯ ಕಾಲೇಜು, ಬಳ್ಳಾರಿ	100	103
ಖಾಸಗೀ ವೈದ್ಯಕೀಯ ಕಾಲೇಜುಗಳು		
1) ಜಿ. ಎನ್. ವೈದ್ಯಕೀಯ ಕಾಲೇಜು, ಬೆಳಗಾಂ	115	115
2) ಜೆ. ಜೆ. ಎಂ. ವೈದ್ಯಕೀಯ ಕಾಲೇಜು, ದಾವಣಗೆರೆ	135	150
3) ಎಂ. ಆರ್. ವೈದ್ಯಕೀಯೆ ಕಾಲೇಜು, ಗುಲ್ಬರ್ಗಾ	115	115
4) ಕಸ್ತೂರಿಬಾ ವೈದ್ಯಕೀಯ ಕಾಲೇಜು, ಮಂಗಳೂರು	140	130
5) ಕಸ್ತೂರಿಬಾ ಮೆಡಿಕಲ್ ಕಾಲೇಜು, ಮಣಿಪಾಲ್	150	150
6) ಕೆಂಪೇಗೌಡ ವೈದ್ಯಕೀಯ ವಿಜ್ಞಾನ ಸಂಸ್ಥೆ, ಬೆಂಗಳೂರು	130	130
7) ಡಾ: ಅಂಬೇಡ್ಕರ್ ಮೆಡಿಕಲ್ ಕಾಲೇಜು ಬೆಂಗಳೂರು	130	130
8) ಎಂ. ಎಸ್. ರಾಮಯ್ಯ ವೈದ್ಯಕೀಯ ಕಾಲೇಜು, ಬೆಂಗಳೂರು	130	130
9) ಸೆಂಟ್ ಜಾನ್ಸ್ ವೈದ್ಯಕೀಯ ಕಾಲೇಜು, ಬೆಂಗಳೂರು	60	60
೪) ಕಾಲೇಜಿನ ಹೆಸರು		
) ಜಿ. ಎನ್. ವೈದ್ಯಕೀಯ ಕಾಲೇಜು, ಬೆಳಗಾಂ	50	47
) ಜೆ. ಜೆ. ಎಂ. ವೈದ್ಯಕೀಯ ಕಾಲೇಜು, ದಾವಣಗೆರೆ	70	95
ಎಂ. ಆರ್. ವೈದ್ಯಕೀಯ ಕಾರೇಜು, ಗುಲ್ಬರ್ಗಾ	50	47
ಕಸ್ತೂರಿಬಾ ವೈದ್ಯಕೀಯ ಕಾಲೇಜು, ಮಂಗಳೂರು	75	55
ಕೆಂಪೇಗೌಡ ವೈದ್ಯಕೀಯ ಕಾಲೇಜು, ಬೆಂಗಳೂರು	120	100
ಡಾ : ಅಂಬೇಡ್ಕರ್ ವೈದ್ಯಕೀಯ ಕಾಲೇಜು, ಬೆಂಗಳೂರು	120	100
ಎಂ. ಎಸ್. ರಾಮಯ್ಯ ವೈದ್ಯಕೀಯ ಕಾಲೇಜು, ಬೆಂಗಳೂರು	120	100

ಆ) ಕಾಲೇಜುಗಳ ಹೆಸರು	1982-83	1983-84
1) ಜೆ. ಎಸ್. ವೈದ್ಯಕೀಯ ಕಾಲೇಜು, ಬೆಳಗಾಂ.	ಹೆಚ್. ಎಫ್. ಡಬ್ಲ್ಯೂ. 28 ಎಂ. ಎಸ್. ಎಫ್. 80 ದಿನಾಂಕ-23 7-80ರ ಆದೇಶದಂತೆ ಶುಲ್ಕದ ಮೊತ್ತ ಕರ್ನಾಟಕದವರಿಗೆ ರೂ. 60,000 ರವರೆಗೂ ಮತ್ತು ಕರ್ನಾಟಕದಲ್ಲದವರಿಗೆ ಮತ್ತು ಹೊರದೇಶದವರಿಗೆ 1,60,000 ನಿಗದಿ ಪಡಿಸಿದೆ.	ಕರ್ನಾಟಕದ ಆಧಿಸೂಚನೆ ದಿನಾಂಕ 21-7-83ರ ಪ್ರಕಾರ ಕರ್ನಾಟಕದವರಿಗೆ 1½ ಲಕ್ಷಕ್ಕೂ ಮತ್ತು ಭಾರತೀಯರಲ್ಲದವರಿಗೆ ಮತ್ತು ಪರದೇಶದವರಿಗೆ 2 ಲಕ್ಷಕ್ಕೂ ಮೀರಿ ಶುಲ್ಕ ವಿಧಿಸಬಾರದೆಂದು ಸೂಚಿಸಿದೆ.
2) ಜೆ. ಜೆ ಎನ್. ವೈದ್ಯಕೀಯ ಕಾಲೇಜು ದಾವಣಗೆರೆ.		
3) ಎಂ. ಆರ್ ವೈದ್ಯಕೀಯ ಕಾಲೇಜು, ಗುಲ್ಬರ್ಗಾ		
4) ಕೆಂಪೇಗೌಡ ವೈದ್ಯಕೀಯ ಕಾಲೇಜು, ಬೆಂಗಳೂರು.		
5) ಡಾ॥ ಅಂಬೇಡ್ಕರ್ ವೈದ್ಯಕೀಯ ಕಾಲೇಜು. ಬೆಂಗಳೂರು.		
6) ಎಂ. ಎಸ್. ರಾಮಯ್ಯ ವೈದ್ಯಕೀಯ ಕಾಲೇಜು ಬೆಂಗಳೂರು.		
7) ಕಸ್ತೂರ್‌ಬಾ ವೈದ್ಯಕೀಯ ಕಾಲೇಜು, ಮಂಗಳೂರು.		

ಈ) ಕಾಲೇಜುಗಳ ಹೆಸರು-ಸರ್ಕಾರಿ ವೈದ್ಯಕೀಯ ಕಾಲೇಜುಗಳು

1) ವೈದ್ಯಕೀಯ ಕಾಲೇಜು, ಬೆಂಗಳೂರು	148	152
2) ವೈದ್ಯಕೀಯ ಕಾಲೇಜು, ಮೈಸೂರು	94	102
3) ಕರ್ನಾಟಕ ವೈದ್ಯಕೀಯ ಕಾಲೇಜು, ಹುಬ್ಬಳ್ಳಿ	95	99
4) ವೈದ್ಯಕೀಯ ಕಾಲೇಜು. ಬಳ್ಳಾರಿ	97	103
ಖಾಸಗಿ ವೈದ್ಯಕೀಯ ಕಾಲೇಜುಗಳು		
1) ಜೆ. ಎನ್ ವೈದ್ಯಕೀಯ ಕಾಲೇಜು ಬೆಳಗಾಂ	90	71
2) ಜೆ. ಜೆ. ಎನ್. ವೈದ್ಯಕೀಯ ಕಾಲೇಜು, ದಾವಣಗೆರೆ	89	82
3) ಎಂ. ಆರ್ ವೈದ್ಯಕೀಯ ಕಾಲೇಜು. ಗುಲ್ಬರ್ಗಾ	84	87
4) ಕೆಂಪೆಗೌಡ ವೈದ್ಯಕೀಯ ಕಾಲೇಜು, ಬೆಂಗಳೂರು	80	109
5) ಎಂ ಎಸ್. ರಾಮಯ್ಯ ಕಾಲೇಜು, ಬೆಂಗಳೂರು	6	35
6) ಡಾ॥ ಅಂಬೇಡ್ಕರ್ ವೈದ್ಯಕೀಯ ಕಾಲೇಜು ಬೆಂಗಳೂರು	66	64
7) ಸೆಂಟ್ ಜಾನ್ಸ್ ವೈದ್ಯಕೀಯ ಕಾಲೇಜು, ಬೆಂಗಳೂರು	24	20
8) ಕಸ್ತೂರ್‌ಬಾ ವೈದ್ಯಕೀಯ ಕಾಲೇಜು, ಮಂಗಳೂರು ಮತ್ತು ಮಣಿಪಾಲ್	112	113

ಶ್ರೀ ಫಿ. ರಾಮದೇವ್.—ಈ ಖಾಸಗಿ ಕಾಲೇಜುಗಳ ಬಗ್ಗೆ ಈ ವರ್ಷ ಸರ್ಕಾರ ಕರ್ನಾಟಕ ವಿದ್ಯಾರ್ಥಿಗಳಿಗೆ ಸೀಟುಗಳನ್ನು ಕೊಡುವುದನ್ನು ಹೆಚ್ಚು ಮಾಡಿದ್ದಾರೆ. ಸಂತೋಷ ಆದರೆ ಇತ್ತೀಚೆಗೆ ಹೈಕೋರ್ಟ್‌ನಲ್ಲಿ ಒಂದು ಜಡ್ಜ್‌ಮೆಂಟ್ ಆಗಿದೆ. ಆ ಜಡ್ಜ್‌ಮೆಂಟ್‌ನ ಪ್ರಕಾರ ವಿದ್ಯಾರ್ಥಿಗಳು ಕೊಟ್ಟರತಕ್ಕಂತಹ ಜಾತಿ ಪ್ರಮಾಣ ಪತ್ರ ಹಾಗೂ ಅಂಕ ಪಟ್ಟಿಯ ಪ್ರಮಾಣ ಪತ್ರದ ಮೇಲೆ ಆದಂತಹದ್ದು. ಆದರಿಂದ ಈ ವರ್ಷ ಮೆಡಿಕಲ್ ಕಾಲೇಜಿಗೆ ಸೇರಿರತಕ್ಕಂತಹ ವಿದ್ಯಾರ್ಥಿಗಳು ಅವರು ಕೊಟ್ಟರತಕ್ಕ ಜಾತಿಯ ಪ್ರಮಾಣ ಪತ್ರ ಹಾಗೂ ಅಂಕ ಪಟ್ಟಿಯ ಪ್ರಮಾಣ ಪತ್ರವನ್ನು ಸ್ಕ್ರೀನ್ ಮಾಡತಕ್ಕಂತಹ ವ್ಯವಸ್ಥೆಯನ್ನು ಮಾಡುತ್ತೀರಾ ?

ಶ್ರೀ ಪಿ. ಜಿ ಆರ್ ಸಿಂಧ್ಯ.—ಸುಳ್ಳು ಪ್ರಮಾಣ ಪತ್ರವನ್ನು ತಮ್ಮ ಜಾತಿಯ ಬಗ್ಗೆ ವಿದ್ಯಾರ್ಥಿಗಳು ಕೊಟ್ಟು ಪ್ರವೇಶ ಪಡೆದಿರುವಂತಹದ್ದು ಸರ್ಕಾರದ ಗಮನಕ್ಕೆ ಯಾವುದೂ ಬಂದಿಲ್ಲ. ಆದರೆ ಈಗ ತಾನೇ ಮಾನ್ಯ ಸದಸ್ಯರು ಆ ಬಗ್ಗೆ ಹೇಳಿದ್ದಾರಿ ನಾನು ಅದರ ಬಗ್ಗೆ ವಿಚಾರಣೆ ಮಾಡಿಸುತ್ತೇನೆ. ಆದರ ಜೊತೆಗೆ ಸದನದಲ್ಲಿ ಈ ಪ್ರಶ್ನೆಯನ್ನು ಎತ್ತಿರುವುದರಿಂದ ನಾನು ಎಲ್ಲಾ ಕಾಲೇಜುಗಳಿಗೆ ಸಂಬಂಧಪಟ್ಟ

ಹಾಗೆ ಮೆರಿಟ್ ಕೋಟಾದಿಂದ ಯಾರು ಆಯ್ಕೆಯಾಗಿದ್ದಾರೆ ಅವರ ಬಗ್ಗೆ ವಿವರಗಳನ್ನು ತರಿಸಿಕೊಂಡು ನಂತರ ಆ ವಿವರಗಳನ್ನು ಮಾನ್ಯ ಸದಸ್ಯರಿಗೆ ಕಳುಹಿಸಿಕೊಡುತ್ತೇನೆ.

ಶ್ರೀ ಪಿ. ರಾಮದೇವ್.--ನೀರುದ್ಯೋಗ ಜಾಸ್ತಿಯಾಗುತ್ತಿರುವುದರಿಂದ, ನಿರುದ್ಯೋಗವನ್ನು ಬೆಳೆಸ ತಕ್ಕಂತಹದ್ದು ರಾಜ್ಯ ಸರ್ಕಾರದ ಆಸಕ್ತಿ ಏನು ಇಲ್ಲ ನಾನು ತಿಳಿದುಕೊಂಡಿದ್ದೇನೆ. ಇನ್ನು ಮುಂದೆ ಹೊಸದಾಗಿ ಕಾಲೇಜುಗಳನ್ನು ಕೊಡತಕ್ಕಂತಹದ್ದನ್ನು ಏನಾದರೂ ತಾವು ನಿಲ್ಲಿಸುತ್ತಿರಾ ? ಆ ಬಗ್ಗೆ ಬೇಡಿಕೆ ಏನಾದರು ಬಂದಿದೆಯೇ ?

ಶ್ರೀ ಪಿ. ಜಿ ಆರ್. ಸಿಂಧ್ಯ.—ಇದಕ್ಕೆ ಮಾನ್ಯ ಸದಸ್ಯರು ಪ್ರತ್ಯೇಕವಾಗಿ ಪ್ರಶ್ನೆಯನ್ನೂ ಕೇಳಿದರೆ ಉತ್ತರ ಒದಗಿಸಿಕೊಡುತ್ತೇನೆ.

ಸ್ಥಳೀಯ ಸಂಸ್ಥೆಗಳ 600 ಆಸ್ಪತ್ರೆಗಳನ್ನು ಸರ್ಕಾರ ತೆಗೆದುಕೊಳ್ಳುವ ಬಗ್ಗೆ

258 (766) ಶ್ರೀ ನಾಗರೆಡ್ಡಿ ಲಚಮರೆಡ್ಡಿ (ಸೇಡಂ) -- ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ರಾಜ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೊ .

ಅ) ಸರ್ಕಾರವು 1979 ಮತ್ತು 81ನೇ ಸಾಲುಗಳಲ್ಲಿ ಸ್ಥಳೀಯ ಸಂಸ್ಥೆಗಳ 600 ಆಸ್ಪತ್ರೆಗಳನ್ನು ಮತ್ತು ಅಲ್ಲಿಯ ನೌಕರರನ್ನು ತನ್ನ ನಿಯಂತ್ರಣಕ್ಕೆ ತೆಗೆದುಕೊಂಡು ಪೂರ್ಣ ಸರ್ಕಾರಿ ಕಾರಣಕ್ಕಾಗಿ ಪರಾಮರ್ಶಕ ಸಮಿತಿಯನ್ನು ನಿಯೋಜಿಸಲಾಗಿದ್ದು ಈ ಸಮಿತಿಯ ವರದಿ ಮೇಲೆ ಸರ್ಕಾರದವರು ಇಲ್ಲಿಯವರೆಗೆ ಕೈಗೊಂಡ ಕ್ರಮವೇನು.-

ಆ) ಈ ಆಸ್ಪತ್ರೆಗಳ ವೈದ್ಯಾಧಿಕಾರಿಗಳು ಹಾಗೂ ಇನ್ನುಳಿದ ಸಿಬ್ಬಂದಿಗಳ ಸಂಖ್ಯೆ ಎಷ್ಟು ?

ಇ) ಮೇಲಿನ ಆಸ್ಪತ್ರೆಗಳ ನೌಕರರಿಗೆ ಸರ್ಕಾರಿ ನೌಕರರಿಗೆ ನೀಡುತ್ತಿರುವ ಎಲ್ಲಾ ಸೌಲಭ್ಯಗಳನ್ನು ನೀಡಲಾಗುತ್ತಿದೆಯೆ ?

ಶ್ರೀ ಪಿ ಜಿ. ಆರ್. ಸಿಂಧ್ಯ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ರಾಜ್ಯಮಂತ್ರಿಗಳು).--
ಸರಕಾರದ ತೀವ್ರ ಪರಿಶೀಲನೆಯಲ್ಲಿದೆ

ವೈದ್ಯಾಧಿಕಾರಿಗಳು	450
ಇತರೆ ನೌಕರರು	1312
ಇಲ್ಲ	

ಶ್ರೀ ನಾಗರೆಡ್ಡಿ ಲಚಮರೆಡ್ಡಿ ಹಾಟೀಲ್.--600 ಆಸ್ಪತ್ರೆಗಳಲ್ಲಿ 450 ವೈದ್ಯಾಧಿಕಾರಿಗಳು ಇದ್ದೆ ಪಕ್ಷದಲ್ಲಿ ಗ್ರಾಮಾಂತರ ಪ್ರದೇಶದಲ್ಲಿರತಕ್ಕಂತಹ ಆಸ್ಪತ್ರೆಗಳಲ್ಲಿ ವೈದ್ಯಾಧಿಕಾರಿಗಳು ಇಲ್ಲದಿರುವ ಪಕ್ಷದಲ್ಲಿ ಗ್ರಾಮಾಂತರ ಪ್ರದೇಶದಲ್ಲಿರತಕ್ಕಂತಹ ಸಾರ್ವಜನಿಕರಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ? ಅದನ್ನು ನಿವಾರಣೆ ಮಾಡುವುದಕ್ಕೆ ಸರ್ಕಾರ ತೆಗೆದುಕೊಳ್ಳುವಂತಹ ಕ್ರಮ ಏನು ? ಮತ್ತೆ ಈ ಆಸ್ಪತ್ರೆಗಳಲ್ಲಿ ಕೆಲಸ ಮಾಡುತ್ತಿರುವಂತಹ ವೈದ್ಯಾಧಿಕಾರಿಗಳಿಗೆ ವೇತನ ಶ್ರೇಣಿಯನ್ನು ಇದುವರೆವಿಗೂ ಕೊಟ್ಟಿಲ್ಲದಿರುವುದಕ್ಕೆ ಕಾರಣವೇನು ? ಈಗಾಗಲೇ ಇದರಲ್ಲಿ 10ರಿಂದ 15 ಪರ್ಸೆಂಟ್ ಬಿಟ್ಟರ್ಡ್ ಆಗಿದ್ದಾರೆ ಇದರ ಬಗ್ಗೆ ಸರ್ಕಾರ ಏನು ಕ್ರಮ ತೆಗೆದುಕೊಳ್ಳುತ್ತದೆ ?

ಶ್ರೀ ಪಿ. ಜಿ. ಆರ್. ಸಿಂಧ್ಯ.--ಮಾನ್ಯ ಸದಸ್ಯರು ಹೇಳಿದಂತೆ ಗ್ರಾಮಾಂತರ ಪ್ರದೇಶದಲ್ಲೆಲ್ಲ ಇರತಕ್ಕ ತಹ ಆಸ್ಪತ್ರೆಗಳಲ್ಲಿ ವೈದ್ಯಾಧಿಕಾರಿಗಳು ಇಲ್ಲದೇ ಇರುವುದನ್ನು ನಾನೂ ಒಪ್ಪುತ್ತೇನೆ ಅದಕ್ಕಾಗಿಯೇ ಈ ವರ್ಷ ಬಜೆಟ್ ಮಂಡನೆ ಮಾಡುವಾಗ ಮಾನ್ಯ ಮುಖ್ಯಮಂತ್ರಿಗಳು ಹೊಸದಾಗಿ ವೈದ್ಯಾಧಿಕಾರಿಗಳನ್ನು ನೇಮಕ ಮಾಡಿಕೊಳ್ಳುವಾಗ ಅವರು ಕೊನೇಪಕ್ಷ 2 ವರ್ಷಗಳವರೆಗಾದರೂ ಗ್ರಾಮಾಂತರ ಪ್ರದೇಶಗಳಲ್ಲಿ ಕೆಲಸ ಮಾಡಬೇಕು ಎಂದು ಕಟ್ಟುನಿಟ್ಟಾದ ನಿಯಮವನ್ನು ಜಾರಿಗೆ ತರುವುದರ ಜೊತೆಗೆ ಅದನ್ನು ಪಾಲನೆ ಮಾಡುವಂತಹ ರೀತಿಯಲ್ಲಿ ಮಾಡುತ್ತೇನೆಂದು ಮಾನ್ಯ ಮುಖ್ಯ ಮಂತ್ರಿಗಳು ಹೇಳಿದಾರೆ. ಅದನ್ನು ಈ ವರ್ಷ ಕಾರ್ಯಾಚರಣೆಗೆ ತರುತ್ತೇವೆ. ಮತ್ತೆ ವೇತನ ಶ್ರೇಣಿಯ ವಿಚಾರದಲ್ಲಿ ಮಾನ್ಯ ಸದಸ್ಯರು ಹೇಳಿದ್ದನ್ನು ನಾನೂ ಒಪ್ಪುತ್ತೇನೆ ನಾನು ಅಧಿಕಾರಕ್ಕೆ ಬಂದಮೇಲೆ ಸ್ಕ್ರೀನಿಂಗ್ ರಿಪೋರ್ಟ್‌ನ್ನು ತರಿಸಿಕೊಂಡು ಪರಿಶೀಲನೆ ಮಾಡುತ್ತಿದ್ದೇನೆ. 2-3 ತಿಂಗಳೊಳಗಾಗಿ ಈ ಬಂದು ಸಮಸ್ಯೆಗೆ ಪರಿಹಾರವನ್ನು ಕಂಡುಹಿಡಿಯುವುದಕ್ಕೆ ಸಾಧ್ಯವಾಗುತ್ತದೆಂದು ಮಾನ್ಯ ಸದಸ್ಯರಿಗೆ ತಿಳಿಸುತ್ತಿದ್ದೇನೆ.

ಶ್ರೀ ಪಿ ರಾಮಚಂದ್ರರಾವ್ —ರಿಟೆರ್ಡ್ ಆದ ಡಾಕ್ಟರ್‌ಗಳಿಗೆ ಏನಾದರೂ ತಾತ್ಕಾಲಿಕವಾದ ಪರಿಹಾರ ಕೊಡುತ್ತೀರಾ. ಡಾಕ್ಟರ್‌ಗಳಿಗೆ ಆಂಟಿಸಿಪೇಟರ್ ಪೆನ್‌ಷನ್‌ನನ್ನು ಏತಕ್ಕೆ ಕೊಡಬಾರದು ?

ಶ್ರೀ ಪಿ ಜಿ. ಆರ್. ಸಿಂಧ್ಯ —ಇದನ್ನು 1979-80ರಲ್ಲಿ ಸರ್ಕಾರಿ ಆಜ್ಞೆ ಮಾಡಿದಾಗ ಆಂಟಿಸಿಪೇಟರ್ ಪೆನ್‌ಷನ್ ಕೊಡಬೇಕಾಗಿತ್ತು. ಈಗ ಕೊಡುವುದರಲ್ಲಿ ಅರ್ಥವಿಲ್ಲವೆಂದು ನಾನು ಸರ್ಕಾರದ ನಿ